**ಕರ್ನಾಟಕ ಸರ್ಕಾರ** **ಸಿಆರ್‌ಪಿ.67**

| |
|---|
| **ಹೇಳಿಕೆ ಹಾಳೆ** |
| **ಆರ್‌ಪಿ.ಸಂ.57** |
| **ನಮೂನೆ ಸಂ.4** |
| **(ಸಿವಿಲ್)** |

## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಎಲ್ ಎ ಸಿ. **ಸಂಖ್ಯೆ:625/2023** ಆರ್ **ಡಬ್ಲ್ಯೂ:1**

**ಸಾಕ್ಷಿದಾರರ ಹೆಸರು** : ನರಸಿಂಹ
**ತಂದೆ ಹೆಸರು** : ಲಚ್ಮಯ್ಯ
**ವಯಸ್ಸು** : **64**
**ವೃತ್ತಿ** : ಕೃಷಿ
**ವಾಸ** : ಶಿರೂರು ಗ್ರಾಮ ಮತ್ತು ಅಂಚೆ

**ದಿಃ 09-10-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:-** **1** ನೇ ಎದುರುದಾರರ ಪರವಾಗಿ ಶ್ರೀ ಪಿ ಕೆ **ರವರಿಂದ**

ನಾನು ಈ ಪ್ರಕರಣದಲ್ಲಿ **1** ನೇ ಎದುರುದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿಯ ಸಂಗತಿಗಳು ಸತ್ಯವಾಗಿವೆ.

ನಾನು ಈ ದಿನ **ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.**

1. ನಿಆರ್‌**-1** ದಿಃ**12-08-1980** ಕ್ಕೆ ಭೂ ನ್ಯಾಯ ಮಂಡಳಿಯವರು ನನ್ನ ತಂದೆ ಲಚ್ಮಯ್ಯ ಪರವಾಗಿ ಮಾಡಿದ ಆದೇಶದ ದೃಢೀಕೃತ ನಕಲು
2. ನಿಆರ್‌**-2** ದಿಃ**27-03-1981** ಕ್ಕೆ ನನ್ನ ತಂದೆ ಲಚ್ಮಯ್ಯ ರವರಿಗೆ ಭೂ ನ್ಯಾಯ ಮಂಡಳಿಯವರು ನೀಡಿದ ಫಾರಂ - **10** ರ ದೃಢೀಕೃತ ನಕಲು
3. ನಿಆರ್‌**-3** ನನ್ನ ತಂದೆ ಲಚ್ಮಯ್ಯ ರವರ ಮರಣ ಪ್ರಮಾಣ ಪತ್ರ
4. ನಿಆರ್‌**-4** ನನ್ನ ಹೆಸರಿನಲ್ಲಿ ಸ್ವಾಧೀನಕ್ಕೆ ಒಳಗೊಂಡ ಆಸ್ತಿ ದಾಖಲಾಗಿದ್ದ ದಿಃ**12-11-1990** ರ ಮ್ಯುಟೇಶನ್ ದೃಢೀಕೃತ ನಕಲು
5. ನಿಆರ್‌**-5** ದಿನಾಂಕಃ**08-06-2017** ಕ್ಕೆ ನಮ್ಮ ತಂದೆಯ ವಾರೀಸುದಾರರು ನನ್ನ ಪರವಾಗಿ ಬರೆದುಕೊಟ್ಟಂತಹಾ ಹಕ್ಕು ಬಿಡುಗಡೆ ಪತ್ರದ ದೃಢೀಕೃತ ನಕಲು

6. ನಿಆರ್-**6** ದಿನಾಂಕಃ**27-08-2012** ರಂದು ನನ್ನ ಹೆಸರಿನಲ್ಲಿ ಹಕ್ಕು ಬಿಡುಗಡೆ ಪತ್ರದ ಆಧಾರದ ಮೇಲೆ ನನ್ನ ಹೆಸರಿಗೆ ಆದ ಮ್ಯುಟೇಶನ್ ರಿಜಿಸ್ಟರಿನ ದೃಢೀಕೃತ ಪ್ರತಿ
7. ನಿಆರ್-**7** ಮೂಲ ದಾವೆ **546/2023** ರಲ್ಲಿ ಆದಂತಹಾ ರಾಜಿ ಪತ್ರದ ಆರ್ಡರ್ ಶೀಟ್‌ನ ದೃಢೀಕೃತ ನಕಲು
8. ನಿಆರ್-**8** ಮೂಲ ದಾವೆ **546/2023** ರಲ್ಲಿ ಆದಂತಹಾ ರಾಜಿ ಅರ್ಜಿಯ ದೃಢೀಕೃತ ನಕಲು
9. ನಿಆರ್-**9** ಶಿರೂರು ಗ್ರಾಮದ ಸರ್ವೇ ನಂಬ್ರ **12/4 ಎ 3 ಎ 1** ರಲ್ಲಿ **1.03** ಎಕ್ರೆ ಸ್ಥಳದ ಗಣಕೀಕೃತ ನಕಲು
10. ನಿಆರ್-**10** ನನ್ನ ಆಧಾರ್ ಕಾರ್ಡಿನ ನೋಟರಿ ಪ್ರತಿ (ಮೂಲ ದಾಖಲೆಯೊಂದಿಗೆ ಹೋಲಿಸಿ ನೋಡಿ ಮರಳಿ ನೀಡಲಾಯಿತು)

ಅರ್ಜಿಯಲ್ಲಿ ಕೇಳಿದಂತೆ ಪರಿಹಾರವನ್ನು ನನಗೆ ನೀಡಲು ನ್ಯಾಯಾಲಯದಲ್ಲಿ ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ</u>** ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**(ಎಂ.ಎ.ಸಿ.ಟಿ.) ಕುಂದಾಪುರ**